BBMP /Addl. Dir /JD South /LP 20/10-11
BBMP /Addl. Dir /JD South LP 0039/18-19

ಪರವಾನಗಿ ಪತ್ರ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪರಿಷ್ಕೃತ ನಕ್ಷೆ ಮಂಜೂರಾತಿ

ಬ್ಲಾಕ್-A, 02 ತಳ + ನೆಲ + ಮೇಲಿನ 12 ಅಂತಸ್ತುಗಳ ವಾಣಿಜ್ಯ ಕಟ್ಟಡ (ಹೋಟೆಲ್)

**No. A 59226**

ಬ್ಲಾಕ್-B, 02 ತಳ + ನೆಲ + ಮೇಲಿನ 13 ಅಂತಸ್ತುಗಳ 39 ಘಟಕಗಳ ವಸತಿ ಸಮುಚ್ಚಯ ಕಟ್ಟಡ, ಕ್ಲಬ್ ಹೌಸ್

ಸಿಟಿ ಮಜಕೂರ್ ವಾರ್ಡ್ ಸಂಖ್ಯೆ 175 ನೇ ಡಿವಿಜನ್ ಬೊಮ್ಮನಹಳ್ಳಿ ವಲಯ ನೇ

ನಂಬರು ಮನೆಗೆ ಮಾಲೀಕ / ವಾಸಸ್ಥರಾದ Pacifica Hotels (Bangalore Project) Pvt Ltd, NO 412/20/5, Roopena Agrahara Bommanahalli Zone

ನೀವು ಬೊಮ್ಮನಹಳ್ಳಿ ಬೆಂಗಳೂರು ನೇ ನಂಬರಿನಲ್ಲಿ ಕಟ್ಟಡ ಕಟ್ಟಬೇಕೆಂಬ ವಿಷಯ

ಕುರಿತು ಬರೆದುಕೊಂಡ ತಾರೀಖು 04-1-2019 ನಲ್ಲಿ ಕೊಟ್ಟ ಅರ್ಜಿ

ನಕ್ಷೆ ಮಂಜೂರಾತಿಯನ್ನು ಮಾನ್ಯ ಆಯುಕ್ತರು ರವರು ದಿನಾಂಕ 11-6-2019 ರಂದು ಅನು-ಮೋದಿಸಿರುತ್ತಾರೆ. ಸದರಿ ನಕ್ಷೆಯ ಸಿಂಧುತ್ವವು 02 ವರ್ಷಗಳು ಮಾತ್ರ ದಿನಾಂಕ 25-11-21

ಜಾಹೀರಾಯಿತು: ರಂದು ಅಂತ್ಯಗೊಳ್ಳುತ್ತದೆ. ಈ ಕಚೇರಿಯ ರಶೀದಿ ಸಂಖ್ಯೆ; RE-IFMS-624 TP/000038. ದಿ 27-6-2019 ರಂತೆ ಪರಿಶೀಲನೆ 2837371. ಪ.ಶು.ಬ 510727. ಉತ್ತಮಿಕೆ ಶುಲ್ಕ 56441, ಭದ್ರತಾ ಠೇವಣಿ 2328051, ನಕ್ಷೆ ಪ್ರತಿ ಶುಲ್ಕ 137600, ಲೈಸೆನ್ಸ್ ಶು. 5342774. ಬಿ.ಸಿ.ಪಿ. ಶುಲ್ಕ 42331, ತೆರೆದ ಸ್ಥಳ ಶುಲ್ಕ 190850, ಪ.ಸ. ದಂಡ ಶುಲ್ಕ. 2302263, CC. ದಂಡ ಶುಲ್ಕ 7457936, (Round 000656)

ಸೂಚನೆ :- ಇದರ ಹಿಂಭಾಗದಲ್ಲಿ ಅಡಕವಾಗಿರುವ ಷರತ್ತುಗಳನ್ನು ಗಮನಿಸಿ ಅದಕ್ಕೆ ಒಳಪಟ್ಟು ನಡೆದುಕೊಳ್ಳಬೆಕು. ಅವುಗಳಲ್ಲಿ ಯಾವುದೇ ಒಂದು ಷರತ್ತುಗಳನ್ನು ಉಲ್ಲಂಘಿಸಿರುವುದಾಗಿ ಕಂಡುಬಂದರೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಕ್ಟಿನ 462ನೇ ನಿಬಂಧನೆ ಮೇಲೆ ಕ್ರಮ ಜರುಗಿಸಲಾಗುವುದು.

ಒಟ್ಟು ಮೊತ್ತ 21207000=00 (ಎರಡು ಕೋಟಿ ಹನ್ನೆರಡು ಲಕ್ಷ ಏಳು ಸಾವಿರ)

ಕಾರ್ಮಿಕ ಮಂಡಳಿಯ ರಶೀದಿ ಸಂಖ್ಯೆ HO/15711/2019 ದಿನಾಂಕ 17-6-2019 ರಂತೆ ಮೊತ್ತ 4191000=00 ಗಳನ್ನು ಮುಂಚಿತವಾಗಿ ಪಾವತಿಸಿರುತ್ತಾರೆ,

26/11/19

ತಾರೀಖು 26 ನೇ 11
ನವೆಂಬರ್ ಮಾಹೆ 2019, ಇಸವಿ

ಜಂಟಿ ನಿರ್ದೇಶಕರು ಕಟ್ಟಡ ಪರವಾನಗಿ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

26/11/19 26/11/19 26/11/19

# ಷರತ್ತುಗಳು

1. ಲೈಸನ್ಸು ಪಡೆದ ಎರಡು ವರ್ಷದೊಳಗಾಗಿ ಕೆಲಸವನ್ನು ಪೂರೈಸಿ ಆಫೀಸಿಗೆ ಬರಹ ಮೂಲಕ ತಿಳಿಸತಕ್ಕದ್ದು.
2. ಮಂಜೂರಾದ ಪ್ಲಾನಿಗೆ ವಿರೋಧವಾದ ಯಾವ ಕಾಮಗಾರಿಯನ್ನೂ ನಡೆಸಕೂಡದು.
3. ಕಾರ್ಪೊರೇಷನ್ ಅಧಿಕಾರಿಗಳು ಅಪೇಕ್ಷಿಸಿದ ವೇಳೆ ತೋರಿಸಲು, ಲೈಸೆನ್ಸು ಮತ್ತು ಪ್ಲಾನು ಸಹಾ ಕಟ್ಟುವ ಸ್ಥಳದಲ್ಲಿ ಸರ್ವದಾ ಸಿದ್ಧವಾಗಿರಬೇಕು.
4. ಕಟ್ಟಡದ ನಿವೇಶನದಲ್ಲಿ ಹಳ್ಳ ತೆಗೆಯಕೂಡದು.
5. ಪಾಯಿಖಾನೆ ಗೊತ್ತುಮಾಡಿರುವ ಸ್ಥಳವನ್ನು ಕಾರ್ಪೊರೇಷನ್ ರೆಗ್ಯುಲೇಷನ್ ಅನುಸರಿಸಿ ಪ್ರತಿದಿನವೂ ಪಾಕ್ ಮಾಡಲು ತಕ್ಕ ಏರ್ಪಾಡು ಮಾಡಬೇಕು. ಪಾಯಿಖಾನೆಯ ನೆಲಕ್ಕೂ ಮತ್ತು ಸುತ್ತಲೂ ಕಲ್ಲು ಕಟ್ಟಿಸಿ ನೀರು ಭೂಮಿಗೆ ಇಳಿಯದಂತೆ ಸಿಮೆಂಟಿನಿಂದ ಸಂದುಗಾರೆ ಮಾಡಿಸತಕ್ಕದ್ದು.
6. ಮಾಳಿಗೆ ನೀರು ಕಾರ್ಪೊರೇಷನ್ ಜಮೀನು ಅಥವಾ ರಸ್ತೆ ಮೇಲೆ ಬೀಳದಂತೆ ಮೇಲಿನಿಂದ ಕೆಳಗಿನವರೆಗೂ ಗೋಡೆಗೆ ಲಗತ್ತಾಗಿ ಗಚ್ಚಿ ದಿಂಡನಿಂದ ತಗಡಿನಿಂದ ಯಾ ವಂಪಾದ ದೋಣಿಗಳನ್ನಿಟ್ಟು ಮೋಹರಿಗೆ ಸರಿಯಾಗಿ ಬಿಡತಕ್ಕದ್ದು.
7. ನೀವು ಕಟ್ಟತಕ್ಕ ಕಟ್ಟಡದ ಗೋಡೆಯ ಅಸ್ತಿಭಾರವು ರಸ್ತೆ ಪಕ್ಕದಲ್ಲಿರುವ ಮೋಹರಿಯಿಂದ ಒಂದೂವರೆ ಅಡಿಗಿಂತ ಕಮ್ಮಿ ದೂರದಲ್ಲಿರಕೂಡದು.
8. ಈ ಲೈಸೆನ್ಸಿನಿಂದ ನೀವು ಗೈರ್ ಮಾಮೂಲು ದೋಣಿ ಅಥವಾ ಬಚ್ಚಲು ನೀರು ತಿರುಗಿಸುವುದಕ್ಕೂ ಹೊಸದಾಗಿ ದಾರಿ ಮಾಡಿಕೊಳ್ಳುವುದಕ್ಕೂ ಬಾಗಿಲು ಕಿಟಕಿಗಳನ್ನು ಇಡಿಸುವುದಕ್ಕೂ ಅಥವಾ ಜಮೀನು ಸೇರಿಸಿಕೊಳ್ಳುವುದಕ್ಕೂ ಅಪ್ಪಣೆ ಪಡೆದಿರುವುದಿಲ್ಲ.
9. ಕಟ್ಟಡದ ಸಾಮಾನುಗಳನ್ನು ಸರ್ಕಾರಿ ರಸ್ತೆ, ಮೋಹರಿ ಯ ಕಾರ್ಪೊರೇಷನ್ ಜಮೀನಿನಲ್ಲಿ ಹಾಕಿಸಕೂಡದು.
10 ಕಟ್ಟಡದ ನಿವೇಶನದಲ್ಲಿ ಲಂಟಾಣ, ಕತ್ತಾಳಿ, ಬೊಂತೆಕತ್ತಾಳಿ ಇತರ ಆಕ್ಷೇಪಕರವಾದ ಗಿಡಗಳ ಬೇಲಿಯನ್ನು ಅಥವಾ ಮುಳ್ಳು ತಂತಿಯ ಬೇಲಿಯನ್ನು ಹಾಕಿಸಕೂಡದು,
11. ಕಟ್ಟಡದ ಸೂರು ಯಾ ಲೋಮೆಗಳ ಕಿಟಕಿಗಳ ಮೇಲಿನ ಬಿಸಿಲ್ತಡಿಕೆ, ದೋಣಿಗಳು ಬೀದಿಯ ಮೋಹರಿಯಿಂದ ಮುಂದಕ್ಕೆ ಉಚ್ಚಾಯಿಸಿ ಬರಕೂಡದು.
12. ಲೈಸೆನ್ಸಿನಿಂದ ಕಟ್ಟತಕ್ಕ ನಿವೇಶನಕ್ಕೆ ಲೈಸೆನ್ಸುದಾರರಿಗೆ ಇದಕ್ಕೆ ಮೊದಲು ಇಲ್ಲದ ಹಕ್ಕುದಾರಿ ಈಗ ಹೊಸದಾಗಿ ಉಂಟಾಗುವುದಿಲ್ಲ ಮತ್ತು ಇತರರಿಗೆ ಇರಬಹುದಾದ ಹಕ್ಕಿಗೆ ಯಾವ ಕುಂದಕವೂ ಉಂಟಾಗುವುದಿಲ್ಲ.
13. ಹೊಗೆ ಹೋಗಲು ಇಡತಕ್ಕ ಚಿಮಣಿಗಳು ಮಾಳಿಗೆ ಮಟ್ಟಕ್ಕಿಂತ 4 ಅಡಿ ಕಮ್ಮಿ ಇಲ್ಲದಂತೆ ಎತ್ತರಿಸಿ ಕಟ್ಟಬೇಕು.
14. ಮೆಟ್ಟಿಲುಗಳನ್ನು ಬೇಸುಮೆಂಟಿನಲ್ಲಿ ಇಟ್ಟುಕೊಳ್ಳಬೇಕೇ ಹೊರತು ಕಟ್ಟಡದಿಂದೀಚೆಗೆ ಕಾರ್ಪೊರೇಷನ್ ಜಮೀನಿನ ಮೇಲೆ ಅಥವಾ ಮೋಹರಿನ ಮೇಲೆ ಬರುವಂತೆ ಇರಕೂಡದು.
15. ಕಿಟಕಿಗಳು, ಮನೆಗಳ ಅಥವಾ ಬೇಲಿಗಳ ಬಾಗಿಲುಗಳು ಒಳಭಾಗಕ್ಕೆ ತೆರೆಯುವಂತೆ ಇಡಿಸಬೇಕಲ್ಲದೆ ಕಾರ್ಪೊರೇಷನ್ ಜಾಗದ ಮೇಲೆ ಬರುವಂತೆ ಇಡಿಸಕೂಡದು.
16. ಗೋಡೆಗಳನ್ನು ಪೂರ್ತಿ ಮಣ್ಣಿನಿಂದ ಕಟ್ಟಿಸಕೂಡದು.
17. ಕಟ್ಟಡಗಳನ್ನು ಪೂರೈಸಿದ ಒಂದು ತಿಂಗಳೊಳಗಾಗಿ ಕಾರ್ಪೊರೇಷನ್ ಆಫೀಸಿಗೆ ಬರಹ ಮೂಲಕ ತಿಳಿಸತಕ್ಕದ್ದು.
18. ಮೇಲ್ಕಂಡ ಷರತ್ತುಗಳಿಗೂ ಮತ್ತು ಬೈಲಾಗಳಲ್ಲಿ ನಮೂದಿಸಿರುವ ಷರತ್ತುಗಳಿಗೂ ವಿರೋಧವಾಗಿ ನಡೆದಲ್ಲಿ ನಿಮ್ಮನ್ನು ಕಾರ್ಪೊರೇಷನ್ ಆಕ್ಟಿನ 381 ನೇ ಇಲ್ಲವೇ 462 ನೇ ನಿಬಂಧನೆಯಂತೆಯಾಗಲೀ ಅಥವಾ ಇವೆರಡು ನಿಬಂಧನೆಗಳಂತೆಯಾಗಲೀ ಶಿಕ್ಷೆಗೆ ಗುರಿಪಡಿಸಲಾಗುವುದು.